# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ನಿ.ನ.ಯೋ/ಬೊ.ವ/ಎಲ್.ಪಿ/0446/20-21/22-23.

ಸಹಾಯಕ ನಿರ್ದೇಶಕರು ನಗರ ಯೋಜನೆ
(ಬೊಮ್ಮನಹಳ್ಳಿ) ವಲಯ ರವರ ಕಛೇರಿ, ಬೇಗೂರು
ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು-560068.
ದಿನಾಂಕ: 30/09/2022.

ಅನುಸೂಚಿ-VII
(ಉಪವಿಧಿ ಸಂಖ್ಯೆ: 5.3)

**ಪ್ರಾರಂಭಿಕ ಪ್ರಮಾಣ ಪತ್ರ**

**ವಿಷಯ:**- ಸಾಮಾನ್ಯ ಪರವಾನಗಿ ಸಂಖ್ಯೆ: ಎಲ್.ಪಿ. 0446/20-21, ದಿನಾಂಕ: 22/10/2021ರಂದು ಪಡೆದಿರುವ ವಸತಿ ಸಮುಚ್ಚಯ ಕಟ್ಟಡ ನಿರ್ಮಾಣ ಪ್ರಾರಂಭಿಸಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**- ತಮ್ಮ ಮನವಿ ಪತ್ರ ದಿನಾಂಕ: 20/06/2022.

*********

ವಾರ್ಡ್ ಸಂಖ್ಯೆ: 192ರಲ್ಲಿನ ಸ್ವತ್ತಿನ ಖಾತಾ ಸಂಖ್ಯೆ: 20/ಸ.ನಂ.61/20, ಎಳೇನಹಳ್ಳಿ ಗ್ರಾಮ, ಬೆಂಗಳೂರು ಸ್ವತ್ತನ್ನು ದಿನಾಂಕ: 30/06/2022 ರಂದು ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಲಾಯಿತು. ಈ ಸ್ವತ್ತಿನಲ್ಲಿ ನಿರ್ಮಿಸಿರುವ ಆರ್.ಸಿ.ಸಿ ತಳಪಾಯ ಸ್ಥಂಭಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬೊಮ್ಮನಹಳ್ಳಿ) ವಲಯ ಕಛೇರಿಯಲ್ಲಿ ಸಾಮಾನ್ಯ ಪರವಾನಗಿಯಡಿ ಎಲ್.ಪಿ.0446/20-21, ದಿನಾಂಕ: 22/10/2021ರಂದು ಪರವಾನಿಗೆ ನೀಡಿರುವ ಸ್ಟಿಲ್ಟ್, ನೆಲ, ಒಂದು, ಎರಡು ಮತ್ತು ಮೂರನೇ ಅಂತಸ್ತಿನ ವಸತಿ ಸಮುಚ್ಚಯ ಕಟ್ಟಡದ ನಕ್ಷೆಯ ಪ್ರಕಾರ ಪರಿಶೀಲಿಸಲಾಗಿ, ಸ್ಥಳದಲ್ಲಿನ ನಡುಜಾಗಗಳು ಮಂಜೂರಾತಿ ನೀಡಿರುವ ನಕ್ಷೆಯ ಪ್ರಕಾರ ಇರುವುದು ಕಂಡುಬಂದಿದೆ. ಆದ್ದರಿಂದ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಈ ಮೂಲಕ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

1. ಯಾವುದೇ ಬದಲಾವಣೆಗಳನ್ನಾಗಲೀ, ಮಾರ್ಪಾಡುಗಳನ್ನಾಗಲೀ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೇ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
2. ಕಾಮಗಾರಿಯು, ಅಡಿಪಾಯದ ಅಥವಾ ಸ್ಥಂಭಗಳ ಆಧಾರ ಅಥವಾ ಸ್ಥಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡ ಹಂತವನ್ನು ತಲುಪಿದಾಗ ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡದ ಉಪವಿಧಿಗಳ ಪ್ರಕಾರ ಕೈಗೊಂಡಿರುವ ಬಗ್ಗೆ ಕಾಮಗಾರಿಯನ್ನು ಪರಿವೀಕ್ಷಣೆ ಮತ್ತು ಶೋಧನೆ ಮಾಡಲು ನೆರವು ನೀಡುವ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು.
3. ಸದರಿ ಸ್ವತ್ತಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ವ್ಯಕ್ತಿಗಳಿಂದ ತಂಟೆ ತಕರಾರು ಬಂದಲ್ಲಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವನ್ನು ಯಾವುದೇ ಮುನ್ಸೂಚನೆ ಇಲ್ಲದೆ ಏಕ ಪಕ್ಷೀಯವಾಗಿ ವಾಪಸ್ಸು ಪಡೆಯುವ ಷರತ್ತಿಗೊಳಪಟ್ಟಿದೆ.

ಅರ್ಜಿದಾರರು ಪ್ರಾರಂಭಿಕ ಪ್ರಮಾಣ ಪತ್ರಕ್ಕಾಗಿ ರೂ. 1,50,000/-ಗಳನ್ನು ಡಿ.ಡಿ ಸಂಖ್ಯೆ: 018695, ದಿನಾಂಕ: 28/09/2022ರ ಡಿ.ಡಿಯನ್ನು ರಸೀದಿ ಸಂಖ್ಯೆ: RE-ifms458-TP/000027ರನ್ವಯ ದಿನಾಂಕ: 30/09/2022ರಂದು ಬಿ.ಬಿ.ಎಂ.ಪಿ ಬೊಕ್ಕಸಕ್ಕೆ ಪಾವತಿಸಲಾಗಿರುತ್ತದೆ.

ಸಹಾಯಕ ನಿರ್ದೇಶಕರು
ನಗರ ಯೋಜನೆ (ಬೊಮ್ಮನಹಳ್ಳಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
30/09/2022

**ರವರಿಗೆ,**
ಶ್ರೀಮತಿ. ಚಂದ್ರಪ್ರಭಾ .ಬಿ,
ಖಾತಾ ಸಂಖ್ಯೆ: 20/ಸ.ನಂ.61/20,
ಎಳೇನಹಳ್ಳಿ ಗ್ರಾಮ, ವಾರ್ಡ್ ನಂ-192,
ಬೆಂಗಳೂರು.